**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು), 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂ: ಎಸ್1/ವಾ.ಪ/ಛಾ.ಪ್ರ.&ಮ.ಮೌ.ಆ.ಲೈ/81/2019-20

ದಿನಾಂಕ: 09.03.2020

**ಸುತ್ತೋಲೆ**

**ವಿಷಯ:** ಜನವರಿ-2020ರ ವಾಣಿಜ್ಯ ಪರೀಕ್ಷೆಯ ಛಾಯಾಪ್ರತಿ ಹಾಗೂ ಮರುಮೌಲ್ಯಮಾಪನಕ್ಕೆ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸುವ ಬಗ್ಗೆ

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಪರೀಕ್ಷಾ ಏಕೀಕರಣ ನಿರ್ವಹಣಾ ವ್ಯವಸ್ಥೆ ಪ್ರಗತಿ-10 ಯೋಜನೆಯಡಿಯಲ್ಲಿ 2018ರಿಂದ ಬಹುತೇಕ ಪರೀಕ್ಷಾ ಚಟುವಟಿಕೆಗಳನ್ನು ತಾಂತ್ರಿಕವಾಗಿ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

**:ಛಾಯಾಪ್ರತಿ ಹಾಗೂ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಪ್ರಸ್ತುತ ಚಾಲ್ತಿಯಲ್ಲಿದ್ದ ವಿಧಾನ:**

ಭೌತಿಕವಾಗಿ ಮಂಡಳಿಯಿಂದ ನೀಡಲಾಗುತ್ತಿದ್ದ ನೆಫ್ಟ್ ಚಲನ್, ಛಾಯಾಪ್ರತಿ ಅರ್ಜಿಗಳನ್ನು ವಾಣಿಜ್ಯ ಸಂಸ್ಥೆಗಳಿಗೆ ನೀಡಿ ನಿಗದಿತ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತಿತ್ತು. ಅದರಂತೆ ಅರ್ಜಿಗಳನ್ನು ಭರ್ತಿಮಾಡಿ ನಿಗದಿತ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ನೀಡಲಾಗಿದ್ದ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಲಾಗುತ್ತಿತ್ತು. ಅನಂತರ ಮರುಮೌಲ್ಯಮಾಪನಕ್ಕೆ ಪ್ರತ್ಯೇಕವಾಗಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತಿತ್ತು. ಈ ಚಾಲ್ತಿಯಲ್ಲಿರುವ ವಿಧಾನವನ್ನು ಜನವರಿ-2020ರಿಂದ ಹಿಂಪಡೆದು ಆನ್‌ಲೈನ್ ಮೂಲಕ ಸದರಿ ಸೇವೆಯನ್ನು ಪಡೆಯುವ ಅವಕಾಶ ಕಲ್ಪಿಸಿದೆ.

**ಜನವರಿ-2020ರಿಂದ ವಾಣಿಜ್ಯ ಪರೀಕ್ಷೆಯ ಛಾಯಾಪ್ರತಿ & ಮರುಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ವಿಧಾನ:**

ಈಗಾಗಲೇ ವಾಣಿಜ್ಯ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗಿದ್ದು, ಜನವರಿ-2020ರ ಸಾಲಿನಿಂದ ಮಂಡಳಿಯ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಛಾಯಾಪ್ರತಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಆನ್‌ಲೈನ್‌ನಲ್ಲಿಯೇ ಶುಲ್ಕವನ್ನು ಪಾವತಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಶುಲ್ಕ ಪಾವತಿ ಮಾಡಲು ಆಫ್‌ಲೈನ್‌ನಲ್ಲಿ ಚಲನ್ ಡೌನಲೋಡ್ ಮಾಡಿಕೊಂಡು ಕಾರ್ಪೋರೇಶನ್ ಬ್ಯಾಂಕಿನಲ್ಲಿ ಪರೀಕ್ಷಾ ಶುಲ್ಕ ಪಾವತಿಸಬಹುದಾಗಿರುತ್ತದೆ. ನಂತರ ಜನರೇಟ್ ಆಗುವ ಚಲನ್ ಸಂಖ್ಯೆಯನ್ನಾಧರಿಸಿ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನು ಮಂಡಳಿಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗುವುದು. ಇದರ ಮಾಹಿತಿಯನ್ನು ಅಭ್ಯರ್ಥಿಯ ನೊಂದಾಯಿತ ಮೊಬೈಲ್ ಸಂಖ್ಯೆಗೆ ರವಾನಿಸಲಾಗುವುದು.

ಆನ್‌ಲೈನ್‌ನಲ್ಲಿ ಛಾಯಾಪ್ರತಿಯನ್ನು ಪಡೆದ ಅಭ್ಯರ್ಥಿಗಳಿಗೆ ಮಾತ್ರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಮರುಮೌಲ್ಯಮಾಪನಕ್ಕೆ ಮಂಡಳಿಯ ಜಾಲತಾಣದ ಮೂಲಕವೇ ಅರ್ಜಿ ಸಲ್ಲಿಸುವುದು. ಈ ಬಗ್ಗೆ ವಿವರವಾದ Flow chart ಮಂಡಳಿಯ ಜಾಲತಾಣ(www.kseeb.kar.nic.in) ದಲ್ಲಿ ಲಭ್ಯವಿದೆ.

(ವಿ.ಸುಮಂಗಲ) 9/3/2020

ನಿರ್ದೇಶಕರು

(ಇತರೆ ಪರೀಕ್ಷೆಗಳು)

**ಪ್ರತಿಯನ್ನು:**

1. ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು, ಮೈಸೂರು ಬೆಳಗಾವಿ ಮತ್ತು ಗುಲ್ಬರ್ಗದವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಅಧ್ಯಕ್ಷರು, ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘ, ಮಲ್ಲೇಶ್ವರಂ, ಬೆಂಗಳೂರು.
3. ರಾಜ್ಯದ ಎಲ್ಲಾ ವಾಣಿಜ್ಯ ಸಂಸ್ಥೆಗಳ ಮುಖ್ಯಸ್ಥರಿಗೆ.
4. ಕಛೇರಿ ಪ್ರತಿ